# ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ
ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

1917-2017

100 Years of Excellence in Education

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 10 ಸಂಪುಟ: 3 ಪುಟ: 2

@ KACD100 27/03/2017 readers can view at kcd2017.blogspot.in


## ಬೆಳಕು

ಜಗತ್ತು ಬದಲಾಗಬೇಕೆಂದರೆ
ಮೊದಲು ನಾವು
ಬದಲಾಗಬೇಕು ಬದಲಾವಣೆ
ನಮ್ಮಿಂದಲೇ ಆರಂಭವಾಗಲಿ

–ಪೂರ್ಣಚಂದ್ರ

## Unbelievable facts

**East or west, India is the best**

More than 54 crore people voted in the 2014 General Election – more people than the population of USA, UK, Australia and Japan combined.

Number of births in India every year is more than the total population of Australia, and many other nations.

India has the largest English speaking population in the world.

At an estimate, 25% of the total workforce of the world's population will be from India in the next year or so.

India's first rocket was brought on cycle and a satellite on bullock cart.

And despite budgetary constraints, India's space program is one of the top 5 space programs in the world.

In 2004, 200 women took law in their own hands and came to the court armed with vegetable knives and chilli powder and murdered on the court floor a serial rapist – Akku Yadav. Then every woman claimed responsibility for the murder.

English Actor Sir Ben Kingsley's birth name is Krishna Pandit Bhanji and he is of Indian descent.

In a village called Shani Shingnapur in Maharashtra, people have been living in houses with no doors for generations. This is because they believe that whoever steals anything from this place will incur the wrath of Shani God and will have to pay for his/her sins very dearly. There is no police station in this village either..

-continues in next episode

## ಮಹಿಳೆಯರ ಮೇಲೆ ಒತ್ತಾಯ ಪೂರ್ವಕವಾಗಿ ಕಟ್ಟುಪಾಡುಗಳನ್ನು ಹೇರಲಾಗುತ್ತಿದೆ: ಡಾ. ಮಲ್ಲಿಕಾ ಘಂಟಿ

ಸನಾತನ ಧರ್ಮದಲ್ಲಿರುವ ಕಟ್ಟುಪಾಡುಗಳನ್ನು ಮಹಿಳೆಯ ಮೇಲೆ ಇಂದು ಒತ್ತಾಯ ಪೂರ್ವಕವಾಗಿ ಹೇರಲಾಗುತ್ತದೆ ಎಂದು ಹಂಪಿಯ ಕನ್ನಡ ವಿಶ್ವವಿದ್ಯಾಯಲದ ಕುಲಪತಿ ಶ್ರೀಮತಿ ಮಲ್ಲಿಕಾ ಘಂಟಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿಶ್ವವಿದ್ಯಾಲಯದ, ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕಾಲೇಜಿನ ಮಹಿಳಾ ಸಂಘವು ಆಯೋಜಿಸಿದ ಪರಿವರ್ತನೆಗಾಗಿ ದಿಟ್ಟರಾಗಿ ಎಂಬ ವಿಷಯದ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತಿದ್ದರು.ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿಯನ್ನು ಇಂದಿಗೂ ಕಲ್ಪಿಸಲಾಗಿಲ್ಲ ಇದು ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಆಗಿದೆ ಎಂದರು. ಇಂದು ಮಹಿಳೆಯರು ಧರಿಸುವ ಬಟ್ಟೆಗಳ ಕುರಿತು ಸಾಕಷ್ಟು ಚರ್ಚೆ ಆಗುತ್ತಿದ್ದು, ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಗಿದ್ದು, ಎಲ್ಲಿಯೂ ಮಹಿಳೆಯರ ಮೇಲೆ ಅತ್ಯಾಚಾರವಾದಾಗ ಅಲ್ಲಿ ಅವಳು ಧರಿಸಿದ ಬಟ್ಟೆಯೇ ಅತ್ಯಾಚಾರಕ್ಕೆ ಕಾರಣ ಎಂದು ಇಂದು ಸಂಪ್ರದಾಯವಾದಿಗಳು ಅದನ್ನು ಬಿಂಬಿಸುತ್ತಿದ್ದಾರೆ ಎಂದರು.



ಹಂಪಿಯ ಕನ್ನಡ ವಿಶ್ವವಿದ್ಯಾಯಲದ ಕುಲಪತಿ ಶ್ರೀಮತಿ ಮಲ್ಲಿಕಾ ಘಂಟಿ ಒಂದು ದಿನದ ಮಹಿಳಾ ಕಾರ್ಯಾಗಾರವವನ್ನು ಉದ್ಘಾಟಿಸುತ್ತಿರುವದು.

ಮಹಿಳೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಇನ್ನೂ ಸಬಲರಾಗಬೇಕಾದರೆ ಅವಳು ಎಲ್ಲ ಕಟ್ಟುಪಾಡುಗಳಿಂದ ಹೊರಬರಬೇಕಾದದು ಅವಶ್ಯಕ ಎಂದ ಅವರು ಹಿಂದಿನ 30 ವರ್ಷಗಳ ಹಿಂದೆ ಇದ್ದ ಪರಿಸ್ಥಿತಿ ಇಂದು ಹಾಗಯೇ ಮಹಿಳೆಯರ ಮೇಲೆ ಕಟ್ಟುಪಾಡುಗಳನ್ನು ಹೇರಲಾಗುತ್ತಿದೆ. ಆದ್ದರಿಂದ ಇಂದಿನ ಯುವತಿಯರು ವ್ಯವಸ್ಥೆಯ ಕುರಿತು ತಮ್ಮನ್ನು ತಾವು ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು. ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಮಹಿಳೆಯರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ತಮ್ಮ ಹಕ್ಕು ಭಾದ್ಯತೆಗಳಿಗೆ ಸಂಘಟಿತರಾಗಿ ಹೋರಾಡಬೇಕಾದ ಅವಶ್ಯಕತೆ ಇದೆ ಎಂದರು.

ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಇಂದು ಮಹಿಳೆಯು ಎಲ್ಲ ಕ್ಷೇತ್ರಗಳಲ್ಲಿ ಮುಂದೆ ಇದ್ದರೂ ಅವಳ ಮೇಲೆ ಅತ್ಯಾಚಾರ ದೌರ್ಜನ್ಯ ಅವ್ಯಾಹತವಾಗಿ ನಡೆಯುತ್ತಿದೆ ಇದು ನಮ್ಮ ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್.ಎಸ್.ಕಟ್ಟಿಮನಿ ಮಾತನಾಡಿ ದೇಶವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರಗತಿ ಸಾಧಿಸಬೇಕಾದರೆ ಮಹಿಳೆಯ ಪಾತ್ರ ಬಹಳ ಮುಖ್ಯವಾಗಿದ್ದು, ಇಂದು ಪಂಚಾಯಿತ ಹಂತದಲ್ಲಿ ಮಹಿಳೆಯರಿಗೆ ಮೀಸಾಲಾತಿಯನ್ನು ಕಲ್ಪಿಸಲಾಗಿದ್ದು, ಇದು ಮುಂದಿನ ಹಂತಗಳಲ್ಲಿ ಅವರಿಗೆ ಶೇ 33 ರಷ್ಟು ಮೀಸಲಾತಿಯನ್ನು ನೀಡಬೇಕಾಗಿದೆ ಎಂದರು. ಭಾರತೀಯ ಸಂವಿಧಾನವು ಇಂದು ಎಲ್ಲ ರೀತಿಯಿಂದಲೂ ಮಹಿಳೆಯರಿಗೆ ಕಾನೂನುಗಳನ್ನು ರೂಪಿಸಿದೆ ಆದರೆ ಅವು ಸಮರ್ಪಕವಾಗಿ ಜಾರಿಯಾಗಬೇಕಾಗಿದೆ ಎಂದರು. ಮಹಿಳಾ ಸಂಘದ ಕಾರ್ಯದರ್ಶಿಯಾದ ಡಾ ಎಸ್ ಅನ್ನಪೂರ್ಣ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ ವಿಭಾವರಿ ಕುಲಕರ್ಣಿ ಅತಿಥಿಗಳನ್ನು ಸ್ವಾಗತಿಸಿದರು. ಸುಮೇಧಾ ಹೆಗಡೆ ಮತ್ತು ಗೀತಾ ಬಸಣ್ಣನವರ್ ಕಾರ್ಯಕ್ರಮವನ್ನು ನಿರೂಪಿಸಿದರು. ಪೂರ್ಣಿಮಾ ಬಾರಿಮನಿ ವಂದಿಸಿದರು.

## "ಸತತ ಅಧ್ಯಯನ ಪ್ರಯತ್ನದಿಂದ ಯಶಸ್ಸನ್ನು ಸಾಧಿಸಲು ಸಾಧ್ಯ: ಜಿ.ಪಂ. ಕಾರ್ಯನಿರ್ವಾಹಕಿ ಆರ್.ಸ್ನೇಹಲ್"




ಧಾರವಾಡ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಕ ಅಧಿಕಾರಿ ಶ್ರೀಮತ್ತಿ ಸ್ನೇಹಲ್. ಆರ್ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಪತ್ರಿಭಾ ಸ್ಪಂದನೆ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವದು.

ಯಾರು ನಿರ್ದಿಷ್ಟವಾದ ಗುರಿ ಮತ್ತು ತಾಳ್ಮೆ ಹೊಂದಿರುತ್ತಾರೋ ಅವರು ಜೀವನದಲ್ಲಿ ಯಶಸ್ಸನ್ನು ಖಂಡಿತ ಸಾಧಿಸುತ್ತಾರೆ ಎಂದು ಧಾರವಾಡ ಜಿಲ್ಲಾ ಪಂಚಾಯಿತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ಸ್ನೇಹಲ್.ಆರ್ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿಬಿಎ ಸಭಾಂಗಣದಲ್ಲಿ 2016–17ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಥಮ ಮತ್ತು ದ್ವಿತಿಯ ಪಿಯುಸಿ ವಿದ್ಯಾರ್ಥಿಗಳ 'ಪ್ರತಿಭಾ ಸ್ಪಂದನ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಇಂದು ಭಾರತ ಸರಕಾರವು ಪ್ರತಿ ವರ್ಷ ಲೋಕ ಸೇವಾ ಆಯೋಗದ ಮೂಲಕ ನಡೆಸುವ ಸ್ಪರ್ಧಾತ್ಮಕ ಪರಿಕ್ಷೆಗಳಿಗೆ ಪ್ರತಿ ವರ್ಷವು 5 ಲಕ್ಷ ಅಭ್ಯರ್ಥಿಗಳು ಹಾಜಾರಾಗುತ್ತಿದ್ದು, ಅದರಲ್ಲಿ 25 ರಿಂದ 30 ಸಾವಿರದಷ್ಟು ಅಭ್ಯರ್ಥಿಗಳು ಪ್ರೀಲಿಮ್ಸ್ ಹಂತದ ಪರೀಕ್ಷೆ ಪಾಸಾದರೆ, ಮೇನ್ಸ್ ಪರೀಕ್ಷೆಯಲ್ಲಿ 50 ಸಾವಿರ ಅಭ್ಯರ್ಥಿಗಳು ಪಾಸಾಗುತ್ತಾರೆ. ಆದರೆ ಕೊನೆಗೆ ಕೇವಲ 250 ರಿಂದ 300 ಅಭ್ಯರ್ಥಿಗಳು ಮಾತ್ರ ಸೇವೆಗೆ ಆಯ್ಕೆಯಾಗುತ್ತಾರೆ ಎಂದು ಅವರು ವಿಶ್ಲೇಷಿಸದರು. ಇದು ಸ್ಪರ್ಧಾತ್ಮಕ ಯುಗವಾಗಿದ್ದು, ಕೇವಲ ಸರಕಾರಿ ನೌಕರಿಯನ್ನು ಅವಲಂಬಿಸದೆ ಬೇರೆ ಬೇರೆ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ಸಾಧಿಸಲು ಪ್ರಯತ್ನಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪಿ.ಯು.ಸಿ. ವಿಭಾಗದ ಪ್ರಾಚಾರ್ಯರಾದ ಡಾ.ರಾಜೇಶ್ವರಿ ಮಹೇಶ್ವರಯ್ಯ ಪ್ರತಿಭಾ ಸ್ಪಂದನ ಕಾರ್ಯಕ್ರಮವನ್ನು ಕಳೆದ 4–5 ವರ್ಷಗಳಿಂದ ಪಿ.ಯು. ವಿದ್ಯಾರ್ಥಿಗಳಿಗಾಗಿ ಸಂಯೋಜಿಸಿದ ಬಗೆಯನ್ನು ತಿಳಿಸಿದರು.

ಕಾರ್ಯಕ್ರದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು ಮತ್ತು ಸತತ ಅಧ್ಯಯನದ ಪ್ರಯತ್ನದಿಂದ ಯಶಸ್ಸನ್ನು ಸಾಧಿಸಲು ಸಾಧ್ಯ ಆದ್ದರಿಂದ ನಿವೆಲ್ಲರು ಅಧ್ಯಯನ ಶೀಲರಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ ಎಸ್ ಜಿ ಜಾಧವ ಅತಿಥಿಗಳನಗನ್ನು ಸ್ವಾಗತಿಸಿದರು. ದ್ವಿತಿಯ ವರ್ಷದ ವಿದ್ಯಾರ್ಥಿಗಳು ನಿರೂಪಿಸಿ ವಂದಿಸಿದರು.

## "ಹೆಜ್ಜೆ ಇಟ್ಟಾಗಲೆಲ್ಲಾ ಮರುಳಾಗಿಸಿತ್ತು ಮರಳು"



ಕನಸೆಂಬ ರಂಗಸ್ಥಳದಲ್ಲಿ
ನಡೆಯುತಿತ್ತು ನಾಟಕ
ಕಾತುರದಿ ಕಾಯುತ್ತಿದ್ದವು
ವಸಂತಕೆ ಮರಗಳು
ಬೆತ್ತಲಾಗಿ
ಬೃಹದ್ಬಂಡೆಗಳ ಎದೆಗವಚಿ
ಸಾಕಿ;
ಬಳುಕಿ ವಯ್ಯಾರದಿ
ಹರಿಯುತಿತ್ತು ತುಂಗೆಯ
ಸೊಬಗು
ಸಂಜೆಗತ್ತಲಿನಲಿ
ಚಂದ್ರಚೂಡನ ಬೆಳಗು
ಧಾವಿಸಿದ ಒರ್ವ ತುಂಗೆ
ಒಡಲಿಗೆ,
ನಿನ್ನೆ ಹಾಕಿದ್ದ ಬಲೆಯು
ಕಾಣಲು
ಏದುಸಿರು ಬಿಡುತ್ತ
ಪಾನಿಸಿದ ಗುಟುಕು
ತುಂಗೆಯ
ಕಟ್ಟಿದ್ದ ಬಲೆಯ
ಎಳೆಯತೊಡಗಿದ ಬಿಚ್ಚಿ
ಹಾಗೆ,
ಕುಳಿತುಬಿಟ್ಟ ಎಳೆಯಲಾಗದೆ
ಸ್ವಲ್ಪ ನಿರಾಸೆ,
ಅಷ್ಟೆ ಸಂತೋಷದಿಂದ
ಹಾಗೆ ಮೆಲ್ಲನೆ ಎದ್ದು
ಎಳೆಯತೊಡಗಿದ ಬಲೆಯ
'ಉಶ್' ಎಂದ ಸುಸ್ತಾಗಿ.
ಬೆವರೊರಿಸಿಕೊಂಡ ಅರ್ಧ
ಎಳೆಯುವಷ್ಟರಲ್ಲಿ
ಮತ್ತೆ ಎಳೆಯತೊಡಗಿದ
ಸಂತೋಷಗೊಂಡ
ಪೂರ್ತಿ ಬಲೆ ಬಂದದ್ದ–
ರಿಂದ;
ರಾಶಿ ಮೀನು ತುಂಬಿದ್ದರಿಂದ
ಸಾಕ್ಷಿಕರಿಸಿದ್ದವು 'ನಾವು
ಜೀವಂತವಾಗಿದ್ದೀವಿ' ಎಂದು
ನಾಲ್ಕು ಮೀನುಗಳು
ಪುಟಿದೇಳುತ್ತಾ,
ತಮ್ಮ ಇರುವಿಕೆಯ
ಮರೆಮಾಚಿದ್ದವು
ಉಳಿದ ಮೀನುಗಳು
ನಿಶ್ವಾಸಗೊಂಡು
ಈಗಲೂ
ಅವನಿಗೆ ಸ್ವಲ್ಪ ನಿರಾಸೆ
ಅಷ್ಟೇ ಸಂತೋಷ.
ನಿಶ್ವಾಸಗೊಂಡಿದ್ದ ಎಲ್ಲಾ
ಮೀನುಗಳು
ಒಂದಕ್ಕೊಂದು
ಪೈಪೋಟಿಯಂತೆ
ಬೀರುತ್ತಿದ್ದವು ದುರ್ವಾಸನೆ
ಆ ವಾಸನೆಗೆ,
ಅವ ತಡೆಯಲಾಗದೆ
ಜಾಡಿಸಿದ ಬಲೆಯ
ಸುತ್ತಿಕಟ್ಟಿದ ಬಲೆಯ
ಸಾಕ್ಷಿಕರಿಸಿದ್ದ,
ಆ ನಾಲ್ಕು ಮೀನುಗಳ ತನ್ನ
ಚೀಲದಲ್ಲಿ ಹಾಕಿ
ನಡೆದ ತಲೆತಗ್ಗಿಸಿ ಬಿರಬರನೆ
ಸಿಂಹಾವಲೋಕಿಸದೆ.
ರಾಶಿಯಲ್ಲಿ ಬಿದ್ದಿದ್ದ
ಮೀನುಗಳು
ಹುಡುಕುತ್ತಿದ್ದವು ತಮ್ಮ
ಸಾವಿಗೆ ಕಾರಣ
ಹೆಜ್ಜೆ ಇಟ್ಟಾಗಲೆಲ್ಲಾ
ಮರುಳಾಗಿಸಿತ್ತು ಮರಳು
ರಂಗಸ್ಥಳದಲ್ಲಿ
ನಿಧಾನವಾಗಿಪ್ರಜ್ವಲಿಸಿತು
ಬೆಳಕು........

_ಆನಂದ ಆರ್ಯ

# "ಎನ್.ಎಸ್.ಎಸ್ ವಿದ್ಯಾರ್ಥಿಗಳ ಶ್ರಮದಾನದಿಂದ ಗ್ರಾಮಗಳ ಅಭಿವೃದ್ಧಿಗೆ ಸಹಕಾರ"

ಗ್ರಾಮಗಳ ಸರ್ವೂತೋಮುಖ ಬೆಳವಣಿಗೆ ಯಾಗಬೇಕಾದರೆ ಶೈಕ್ಷಣಿಕ ಸಂಸ್ಥೆಗಳ ಸಹಕಾರ ಮತ್ತು ರಾಷ್ಟ್ರೀಯ ಸೇವಾ ಯೋಜನೆಯಂತಹ ಕಾರ್ಯಕ್ರಮಗಳ ಅಗತ್ಯ ಎಂದು ಧಾರವಾಡದ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀಮತಿ ಆರ್ ಸ್ನೇಹಲ್ ಅಭಿಪ್ರಾಯಪಟ್ಟರು.

ಅವರು ತಾಲ್ಲೂಕಿನ ಮನಸೂರ ಗ್ರಾಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಬಿರದ ಸಮಾರೋಪ ಸಮಾರಂಭ ಮತ್ತು ಮನಸೂರನಲ್ಲಿ ಕರ್ನಾಟಕ ಕಾಲೇಜಿನ ಎನ್ ಎಸ್ ಎಸ್ ಸ್ವಯಂ ಸೇವಕ ವಿದ್ಯಾರ್ಥಿಗಳು ನಿರ್ಮಿಸಿದ ಹೈದಿನೈದು ಶೌಚ್ಚಾಲಯಗಳನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇಂದು ಕರ್ನಾಟಕ ಕಲಾ ಕಾಲೇಜು ಎನ್ ಎಸ್ ಎಸ್ ಘಟಕವು ಮನಸೂರ ಗ್ರಾಮಸ್ಥರಿಗೆ ಶೌಚ್ಚಾಲಯಗಳನ್ನು ನಿರ್ಮಿಸಿದ್ದಕ್ಕೆ ಎನ್ ಎಸ್ ಕಾರ್ಯವು ಶ್ಲಾಘನೀಯ ಎಂದರು.

ಪ್ರಾಸ್ತಾವಿಕವಾಗಿ ಮಾತನಡಿದ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜಕರಾದ ಡಾ ಎಸ್ ಬಿ ಭಜಂತ್ರಿ ಮಾತನಾಡಿ ಸತತ ಏಳು ದಿನಗಳ ವರೆಗೆ ಕರ್ನಾಟಕ ಕಲಾ ಮಹಾವಿದ್ಯಾಲಯವು ಕವಿವಿಯ ದತ್ತು ಗ್ರಾಮವಾದ ಮನಸೂರ ಗ್ರಾಮದಲ್ಲಿ ವಿಶೇಷ ವಾರ್ಷಿಕ ಶಿಬಿರವನ್ನು ಆಯೋಜಿಸಿದ್ದು, ಈ ಶಿಬಿರದ ಮುಖ್ಯ ಉದ್ದೇಶ ಮನಸೂರ ಗ್ರಾಮದಲ್ಲಿ 50 ಶೌಚ್ಚಾಲಯಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಆದರೆ



ಕರ್ನಾಟಕ ಕಲಾ ಕಾಲೇಜಿನ ಎನ್ ಎಸ್ ಘಟಕದ ವಿದ್ಯಾರ್ಥಿಗಳು ಮನಸೂರ ಗ್ರಾಮದಲ್ಲಿ ನಿರ್ಮಿಸಿದ ಶೌಚಾಲಯಗಳನ್ನು ಉದ್ಘಾಟಿಸುತ್ತಿರುವದು

ನಮ್ಮ ಎಲ್ಲ ವಿದ್ಯಾರ್ಥಿ ಸ್ವಯಂ ಸೇವಕರ ಮತ್ತು ಗ್ರಾಮಸ್ಥರ ಸಹಕಾರದಿಂದ ಯಶಸ್ವಿಯಾಗಿ 15 ಶೌಚ್ಚಾಲಯಗಳನ್ನು ನಿರ್ಮಿಸಲಾಯಿತು ಇದರ ಜೊತೆಗೆ ಅನೇಕ ಎನ್ ಎಸ್ ಎಸ್ ಘಟಕದ ವತಿಯಿಂದ ಗ್ರಾಮಸ್ಥರಿಗೆ ಅರಿವು ಕಾರ್ಯಕ್ರಮಗಳ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲ ಶ್ರೇಯಸ್ಸು ಎನ್ ಎಸ್ ಎಸ್ ವಿದ್ಯಾರ್ಥಿ ಸ್ವಯಂ ಸೇವಕರಿಗೆ ಸಲ್ಲುತ್ತದೆ ಎಂದು ವಿದ್ಯಾರ್ಥಿಗಳನ್ನು ಸ್ಮರಿಸಿದರು.

ಕರ್ನಾಟಕ ಕಲಾ ಕಾಲೇಜಿನ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಕರ್ನಾಟಕ ವಿಶ್ವವಿದ್ಯಾಲಯವು ಮನಸೂರ ಗ್ರಾಮವನ್ನು ದತ್ತು ಗ್ರಾಮವನ್ನಾಗಿ ಸ್ವೀಕರಿಸದೆ. ಈ ನಿಟ್ಟಿನಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯವು ಇಲ್ಲಿ ಎನ್ ಎಸ್ ಎಸ್ ವಾರ್ಷಿಕ ವಿಶೇಷ ಶಿಬಿರವನ್ನು ಆಯೋಜಿಸಿ ಇಲ್ಲಿಯ ಜನರಿಗೆ ಅರಿವು ಮತ್ತು ಜ್ಞಾನದ ಜೊತೆಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದ ಅವರು ಎನ್ ಎಸ್ ಎಸ್ ವಿದ್ಯಾರ್ಥಿಗಳ ಶ್ರಮದಾನದಂತಹ ಕಾರ್ಯಕ್ರಮಗಳಿಂದ ಗ್ರಾಮಗಳ ಅಭಿವೃದ್ಧಿ ಜೊತೆಗೆ ವಿದ್ಯಾರ್ಥಿಗಳ ಸರ್ವೂತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮನಸೂರ ಗ್ರಾಮ ಪಂಚಾಯತ ಅಧ್ಯಕ್ಷರಾದ ರುಕ್ಮಿಣಿ ತೇಗೂರ ಮಾತನಾಡಿ ಕರ್ನಾಟಕ ಕಲಾ ಕಾಲೇಜಿನ ವಿದ್ಯಾರ್ಥಿಗಳು ನಮ್ಮ ಊರಿನ ಶ್ರೇಯಸ್ಸಿಗೆ ಶ್ರಮಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಧನ್ಯವಾದಗಳನ್ನು ತಿಳಿಸಿದರು ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರಿಗೆ ಹಸಿರು ಬಳೆ ಮತ್ತು ಕುಪ್ಪಸದ ಕಣ ನೀಡಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಮನಸೂರ ಗ್ರಾಮಪಂಚಾಯತಿಯ ಸದಸ್ಯರು ಎನ್ ಎಸ್ ಎಸ್ ವಿದ್ಯಾರ್ಥಿ ಸ್ವಯಂ ಸೇವಕರು ಹಾಜರಿದ್ದರು. ಕರ್ನಾಟಕ ಕಲಾ ಕಾಲೇಜಿನ 'ಅ' ಘಟಕದ ಸಂಯೋಜನಾ ಅಧಿಕಾರಿ ಡಾ. ಝೂಕೀರ ಗುಳಗುಂದಿ ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಸನೀಲ ಪೂಜಾರ ಮತ್ತು ಶಲ್ಪಾ ಸತರೆಡ್ಡಿ ನಿರೂಪಿಸಿ ವಂದಿಸಿದರು.

## "ಸಾಹಿತ್ಯವನ್ನು ಅರ್ಥಪೂರ್ಣವಾಗಿ ಅರ್ಥೈಸಿಕೊಂಡಾಗ ಮಾತ್ರ ವಿಮರ್ಶೆಮಾಡಲು ಸಾಧ್ಯ: ಪ್ರೋ. ಎಡ್‌ವರ್ಡ ವಿಲ್ಸನ್‌ಲಿ"



**ಚಿತ್ರದಲ್ಲಿ ಕೆಂಬ್ರೀಜ್ ವಿಶ್ವವಿದ್ಯಾಲಯದ ಪ್ರೊ. ಎಡ್‌ವರ್ಡ ವಿಲ್ಸನ್‌ಲಿ ಮಾತನಾಡುತ್ತಿರುವದು.**

ಯಾವದೇ ಸಾಹಿತ್ಯದಲ್ಲಿ ಇಂದು ಕ್ರಿಯಾಶೀಲವಾಗಿ ವಿಮರ್ಶೆಯನ್ನು ಮಾಡಬೇಕಾದರೆ ಅದರ ಸ್ವರೂಪ ಮತ್ತು ಆ ಸಾಹಿತ್ಯವನ್ನು ಪೂರ್ಣವಾಗಿ ಅರ್ಥೈಸಿಕೊಂಡಾಗ ಮಾತ್ರ ಕ್ರಿಯಾಶೀಲವಾಗಿ ವಿಮರ್ಶೆಮಾಡಲು ಸಾಧ್ಯ ಎಂದ ಕೆಂಬ್ರೀಜ್ ವಿಶ್ವವಿದ್ಯಾಲಯದ ಪ್ರೋ. ಎಡ್‌ವರ್ಡ ವಿಲ್ಸನ್‌ಲಿ ಅಭಿಪ್ರಾಯ ಪಟ್ಟರು. ಅವರು ಕರ್ನಾಟಕ ವಿಶ್ವವಿದ್ಯಾಲಯದ ಡಾ.ಡಿ.ಸಿ.ಪಾವಟೆ ಅಂತರಾಷ್ಟ್ರೀಯ ಜ್ಞಾನ ವಿನಿಮಯ ಕಾರ್ಯಕ್ರಮದ ಅಡಿಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಡಾ.ಡಿ.ಸಿಪಾವಟೆ ಫೌಂಡೇಶನ್ ಕರ್ನಾಟಕ ಕಲಾ ಮಹಾವಿದ್ಯಾಲಯ ಮತ್ತು ಇಂಗ್ಲೀಷ್ ಪದವಿ ಮತ್ತು ಸ್ನಾತ್ತಕೋತ್ತರ ಪದವಿ ವಿಭಾಗದ ವತಿಯಿಂದ ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಸಭಾಂಗಣದಲ್ಲಿ ಹಮ್ಮಿಕೊಂಡ ವಿಶೇಷ ಉಪನ್ಯಾಸದಲ್ಲಿ ಅವರು ಇಂಗ್ಲೀಷ ಸಾಹಿತ್ಯದಲ್ಲಿ ಕ್ರಿಯಾಶೀಲ ವಿಮರ್ಶೆಗಳು ಎಂಬ ವಿಷಯದ ಕುರಿತು ಮಾತನಾಡುತ್ತಿದ್ದರು.

ಇಂದು ಭಾರತ ಸೇರಿದಂತೆ ಯೂರೋಪದ ಅನೇಕ ರಾಷ್ಟ್ರಗಳು ಇಂಗ್ಲೀಷ್ ಸಾಹಿತ್ಯಕ್ಕೆ ಅನೇಕ ಮಹನಿಯರು ಕೊಡುಗೆಯನ್ನು ನೀಡಿದ್ದಾರೆ. ಆದ್ದರಿಂದ ಇಂಗ್ಲೀಷ್ ಭಾಷೆ ಇಷ್ಟು ವಿಫುಲವಾಗಿ ಬೆಳೆಯಲು ಸಾಧ್ಯವಾಗಿದೆ ಹಾಗೂ ಇಂದು ಕ್ರಿಯಾಶೀಲ ವಿಮರ್ಶೆಗಳು ಇಂಗ್ಲೀಷ್‌ಸಾಹಿತ್ಯದಲ್ಲಿ ಕಡಿಮೆಯಾಗುತ್ತಿವೆ ಎಂದ ಅವರು ಯೂರೋಪದ ಖ್ಯಾತ ಇಂಗ್ಲೀಷ್ ಸಾಹಿತಿ ಥಾಮಸ್ ಹಾರ್ಡಿ ಅವರು ಕವಿತೆಗಳಲ್ಲಿ ಕ್ರಿಯಾಶೀಲ ವಿಮರ್ಶೆ ಯೋಜತೆಗೆ ಒಂದು ವಾಸ್ತವದ ಹೊಸ ಜಗತನ್ನು ಪರಿಚಯಿಸುವದನು ಕಾಣಬಹುದು ಎಂದು ಅವರ ಕವಿತೆಗಳ ಮೂಲಕ ವಿಶ್ಲೇಷಿಸದರು.

ಅವರು ಭಾಷಾ ವಿಜ್ಞಾನದ ನೆಲೆಯಲ್ಲಿ ಕ್ರಿಯಾತ್ಮಕ ವಿಮರ್ಶೆ ನಡೆದು ಬಂದ ಪರಿಯನ್ನು ವಿವರಿಸಿದರು. ಥಾಮಸ್ ಹಾರ್ಡಿ ಅವರ ವಿಮರ್ಶೆ ಅತಿ ಶಕ್ತಿಯುತವಾದ ಭಾವನೆಗಳಿಂದ ಕೂಡಿದೆ. ಆದ್ದರಿಂದ ಅವರ ಕವಿತೆಗಳಲ್ಲಿ ಭಾವನೆಗಳು ಹೆಚ್ಚು ವಿಡಂಬನಾತ್ಮಕವಾಗಿ ಮತ್ತು ವಿಮರ್ಶಕತೆಯಿಂದ ಅವರ ಸಾಹಿತ್ಯ ಕೂಡಿದೆ ಎಂದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧಾಪಕರಾದ ಡಾ ಆರ್ ಎಲ್ ಜಾಡರ್, ಡಾ ಎನ್ ಎಚ್ ಕಲ್ಲೂರ ಡಾ. ಪಾವಟೆ ಫೌಂಡೇಶನ್‌ದ ಸಂಯೋಜಕರಾದ ಡಾ ಹೆಚ್ ಬಿ ನಾಗೂರ ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ಇಂಗ್ಲೀಷ್ ವಿಭಾಗದ ಪ್ರಾಧ್ಯಾಪಕರು ಹಾಗೂ ಇನ್ನಿತರ ಉಪಾನ್ಯಸಾಕರು ಉಪಸ್ಥಿತಿ ಇದ್ದರು. ಮತ್ತು ಸ್ನಾತ್ತಕೊತ್ತರ ಪದವಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ತೃತೀಯ ಸ್ಥಾನ



ಚಿತ್ರದಲ್ಲಿ ಡಾ.ಮಂಜುನಾಥ ಅಸುಂಡಿ, ಡಾ.ವಾಮದೇವ ತಳವಾರ, ಪ್ರಾಚಾರ್ಯರಾದ ಎಸ್ ಎಸ್ ಕಟ್ಟಿಮನಿ, ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮತ್ತು ಕೆಸಿಡಿ ಜಿಮಖಾನಾದ ರೇಖಾ ಚಿತ್ರದಲ್ಲಿ ಕಾಣಬಹುದು. ವಿಜೇತ ವಿದ್ಯಾರ್ಥಿನಿಯರಾದ ವೈಷ್ಣವಿ ಎಂ. ತಾರಾ ವಿ.ಕೆ, ದೀಪಾ ನಾಯಕ, ಮನೀಷಾ.ಎಸ್ ಮತ್ತು ಎಸ್ ವೆಂಕಟೇಶ್ ಇದ್ದಾರೆ.

ಹುಬ್ಬಳ್ಳಿಯ ಜೆ.ಜಿ.ಕಾಮರ್ಸ ಕಾಲೇಜನಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ಅಂತರಮಹಾವಿದ್ಯಾಲಯದ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಎಂ.ಕಾಮ್ ಸ್ನಾತ್ತಕೋತ್ತರ ವಿದ್ಯಾರ್ಥಿನಿಯರಾದ ವೈಷ್ಣವಿ ಎಂ. ತಾರಾ ವಿ.ಕೆ, ದೀಪಾ ನಾಯಕ, ಮನೀಷಾ.ಎಸ್ ಮತ್ತು ಎಸ್ ವೆಂಕಟೇಶ್ ತೃತೀಯ ಸ್ಥಾನಗಳಿಸಿದ್ದಾರೆ. ಈ ಕ್ರೀಡಾಕೂಡದಲ್ಲಿ 8 ತಂಡಗಳು ಭಾಗವಹಿಸಿದ್ದು, ಕೆಸಿಡಿ ಮೂರನೆ ಸ್ಥಾನವನ್ನು ಗಳಿಸಿದೆ. ಇವರ ಸಾಧನೆಗೆ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ಎಸ್.ಎಸ್.ಕಟ್ಟಿಮನಿ ಮತ್ತು ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ತರಬೇತುದಾರ ಡಾ. ಮಂಜುನಾಥ ಅಸುಂಡಿ, ಕೆಸಿಡಿ ಜಿಮಖಾನ ಅಧ್ಯಕ್ಷ ಡಾ ವಾಮದೇವ ತಳವಾರ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯದ ಎಲ್ಲಾ ಉಪನ್ಯಾಸಕರು ಸಂತಸವ್ಯಕ್ತಪಡಿಸಿದ್ದಾರೆ.

ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.